



ವಿಷ್ಣುವಿನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ವಿಷ್ಣುಗಯಾ ಎಂದೂ ಕರೆಯುತ್ತಾರೆ.

ಅಂಡಾಕಾರದಲ್ಲಿರುವ ಲೋನಾರ್ ಸರೋವರ ಸುತ್ತಲೂ ಎತ್ತರವಾದ ಗೋಡೆಯಂತಿರುವ ಅಂಚನ್ನು ಹೊಂದಿದ್ದರೆ, ಕೆಳಗೆ ಕ್ಷಾರಮಿಶ್ರಿತ ಉಪ್ಪುನೀರಿನ ಕೆರೆಯಿದೆ. ಕೆರೆಯ ಅಂಗಳದಲ್ಲಿ 52 ಎಕರೆಯಷ್ಟು ಕೃಷಿಭೂಮಿ ಇದೆ.

## ಕೆರೆಯಂಗಳದಲ್ಲಿ ಕೃಷಿ

ಕೆರೆಯಂಗಳದ ಕೃಷಿಭೂಮಿಯಲ್ಲಿ ತರಕಾರಿ, ಬಾಳೆ, ಪಪ್ಪಾಯಿ, ಮತ್ತು ಹತ್ತಿ ಬೆಳೆಯಲಾಗುತ್ತಿದೆ. ಕೆರೆಯಲ್ಲಿ ಉಪ್ಪುನೀರಿದ್ದರೂ ಅದರ ಅಂಚಿನಲ್ಲಿ ಎಲ್ಲೇ ಗುಂಡಿ ತೋಡಿದರೂ ಸಿಹಿನೀರು ಸಿಗುತ್ತಿದೆ! ಸರೋವರದ ಉತ್ತರ ಪೂರ್ವಾಭಿಮುಖದಲ್ಲಿ ಒರತೆಗಳಿವೆ. ಅವುಗಳಲ್ಲಿ ಧಾರ್ ಎಂಬ ಜಲಧಾರೆ ಸರೋವರದ ಅಂಗಳದಲ್ಲಿರುವ ಕೃಷಿಗೆ ಆಧಾರವಾಗಿದೆ.

ಪಶ್ಚಿಮದಿಂದ ದಕ್ಷಿಣದ ಅಂಚು ಹಸಿರು ಕಾಡಿನಿಂದ ಕೂಡಿದೆ. ಸರೋವರದಲ್ಲಿ ಯಾವುದೇ ರೀತಿಯ ಜಲಚರಗಳಿಲ್ಲ. ಈ ಕೆರೆಯ ನೀರಿನ ಮಟ್ಟ ಋತುವಿಗೆ ಅನುಗುಣವಾಗಿ ಅಲ್ಪ ಪ್ರಮಾಣದ ಏರಿಳಿತ ಕಂಡರೂ ಯಾವತ್ತೂ ಒಣಗಿಲ್ಲ. ಲೋನಾರ್ ಲೇಕ್‌ನ ಮೇಲ್ಮೈಲಕ್ಷಣ, ಅದರಲ್ಲಾಗುವ ಪರಿವರ್ತನೆ ಮಂಗಳ ಗ್ರಹದ ಭೌಗೋಳಿಕ ಪರಿಸರದೊಡನೆ ಸಾಮ್ಯತೆ ಹೊಂದಿದೆ ಎಂದು ಸಂಶೋಧನಾ ವರದಿಯೊಂದು ಹೇಳುತ್ತದೆ.

ಲೋನಾರ್ ಲೇಕ್ ಇತ್ತೀಚಿನ ದಿನಗಳಲ್ಲಿ ಆತಂಕಗಳನ್ನು ಎದುರಿಸುತ್ತಿದೆ. ಸರೋವರದ ಅಂಗಳದಲ್ಲಿ ಕೃಷಿಗೆ ಬಳಕೆಯಾಗುವ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು ಕೆರೆ ಸೇರುತ್ತಿವೆ. ಪ್ರತಿವರ್ಷ ನವರಾತ್ರಿಯಲ್ಲಿ ಬರುವ ಕಮಲಜಾ ದೇವಿ ಜಾತ್ರೆ ಸರೋವರದ ಅಂಗಳದಲ್ಲೇ ನಡೆಯುತ್ತದೆ. ಆಗ ಚೆಲ್ಲಲ್ಪಡುವ ಕಸ ಕೆರೆಯ ಒಡಲನ್ನು ಅನಾಯಾಸವಾಗಿ ಸೇರುತ್ತಿದೆ.

ಲೋನಾರ್‌ನಲ್ಲಿ ಪ್ರವಾಸಿಗಳಿಗೆ ಉಳಿದುಕೊಳ್ಳಲು ವಸತಿಗೃಹಗಳ ಸೌಲಭ್ಯವಿದೆ. ಮಹಾರಾಷ್ಟ್ರ ರಾಜ್ಯ ಪ್ರವಾಸೋದ್ಯಮ ನಿಗಮದ ಸುಸಜ್ಜಿತ ಹೋಟೆಲೂ ಇದೆ. ಇಲ್ಲಿಗೆ ನೇರ ರೈಲು ಸಂಪರ್ಕವಿಲ್ಲ. ಸರ್ಕಾರಿ ಬಸ್ಸು ಅಥವಾ ಖಾಸಗಿ ವಾಹನಗಳ ವ್ಯವಸ್ಥೆ ಇದೆ. ಔರಂಗಾಬಾದಿನಿಂದ ಇದು 43 ಕಿ. ಮೀ. ಅಂತರದಲ್ಲಿದೆ. ಹತ್ತಿರದ ರೈಲು ನಿಲ್ದಾಣ ಲೋನಾರಿನಿಂದ 69 ಕಿ. ಮೀ.